೧೯೦ ರೂ. ಗಳನ್ನು, ತಾ. ೧೭-೧೧-೧೯೬೪ರಂದು ೩೫೦ ರೂ. ಗಳನ್ನು ಕಟ್ಟಿದ್ದಾರೆ. ಶ್ರೀ ಎನ್. ಎಸ್. ಭಟ್ ಅವರದ್ದು ತಾ. ೩೦-೧೧-೧೯೬೩ ರಂದು ಬಾಕಿಯಿದ್ದದ್ದು ೧೨೦ ರೂ, ಗಳು. ತಾ. ೮-೧೧-೧೯೬೩ ರಂದು ೮೦ ರೂ. ಗಳನ್ನು, ತಾ. ೩೦-೧೧-೧೯೬೩ರಂದು ೨೦ ರೂ. ಗಳನ್ನು ಕಟ್ಟಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಸಂಸ್ಥೆಯು ಚುನಾವಣೆ ನಡೆಯುವ ಬಗ್ಗೆ ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕಿದಮೇಲೆ, ಬಾಕಿ ಇರುವವರು ೩ ತಿಂಗಳೊಳಗೆ ಕಟ್ಟುವುದಕ್ಕೆ ಅವಕಾಶ ಕೊಟ್ಟರೂ ಸಹ, ರೀ ಎಲೆಕ್ಟ್ ಆಗುವುದಕ್ಕೆ ಅವಕಾಶವಿದೆಯೇ ?

ಶ್ರೀ ಕೆ ಎನ್ ಪಾಟೀಲ್ —ಯಾರಾದರು ಬಾಕಿ ಇದ್ದರೆ ೩೦ ದಿವಸಗಳಲ್ಲಿ ಬಾಕಿಯನ್ನು ಕಟ್ಟಿದ್ದರೆ ತಮ್ಮ ಮೆಂಬರ್‌ಷಿಪ್ ರದ್ದಾಗುತ್ತದೆಂದು ನೋಟೀಸ್ ಕೊಡಲಾಗುತ್ತದೆ. ಆದರೆ ಈ ಕೇಸ್ ಅದಕ್ಕೆ ಅನ್ವಯ ಆಗುವುದಿಲ್ಲ.

ಅಧ್ಯಕ್ಷರು.—೨೦೫ ಮತ್ತು ೧೩೬ನೇ ಪ್ರಶ್ನೆಗಳನ್ನು ಮಾನ್ಯ ಮಂತ್ರಿಗಳು ಬಂದನಂತರ ತೆಗೆದು ಕೊಳ್ಳುತ್ತೇನೆ.

* *Development of Fisheries in Tanks and Reservoirs*

137. SRI S. M. SHEGRNALY CHANDRASEKHAR (Hosanagara) —

Will the Minister of State for Fisheries and Horticulture be pleased to state.—

the steps taken to develop fisheries in all minor, major tanks and reservoirs in the State on par with sister Departments like Agriculture, Horticulture Departments ?

SRI K. T. RATHOD (Minister of State for Fisheries and Hort culture).—

The following steps have been taken up.—

1. Survey and selection of inland waters suitable for fish cultural operations
2. Improvement of fish breeding techniques and farming practices and increasing production of fish seed.
3. Progressively bringing more acreage of inland waters under fish cultivation by developing the fishery of minor tanks, major tanks, reservoirs and reverine courses through schemes such as A.N.P. Intensive Development of Fisheries of C. D. Blocks, Development of Reservoir Fishery, Fish Farmers Development Agency etc.
4. Extension work in rural areas for spreading the practice of fish culture and consumption.
5. Providing facilities for icing preservation, transportation and Marketing.
6. Training of Fishermen and others in fish cultural practices and deep water fishing techniques.

(SRI K. T. RATHOD)

7. Organisation of Co-operative Societies for fisherman and providing fishery requisite loan, grants for rehabilitation schools for Education etc ; for Socio-Economic improvement.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ —ಉತ್ತರದಲ್ಲಿ ತಮ್ಮ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಖಚಿತವಾದ ಉತ್ತರ ಕೊಟ್ಟಿಲ್ಲ.

† ಶ್ರೀ ಕೆ. ಟಿ. ರಾಠೋಡ್ —ಇತರ ಇಲಾಖೆಗಳ ಕಾರ್ಯಕ್ರಮಗಳೇ ಬೇರೆ, ಮೀನುಗಾರಿಕೆ ಅಭಿವೃದ್ಧಿ ಇಲಾಖೆಯ ಕಾರ್ಯಕಲಾಪಗಳೇ ಬೇರೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಮೀನುಗಾರಿಕೆ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಎರಡನೇ ಪಂಚವಾರ್ಷಿಕ ಯೋಜನೆಯ ನಂತರ ನಾವು ತೆಗೆದುಕೊಂಡಿದ್ದೇವೆ ಮತ್ತು ಈ ಅವಧಿಯಲ್ಲಿ ಮೀನುಗಾರಿಕೆ ಅಭಿವೃದ್ಧಿ ಕೆಲಸ ಕಾರ್ಯಗಳು ಬಹಳ ಪ್ರಮಾಣದಲ್ಲಿ ನಡೆಯುತ್ತಿರುವ ಬಗ್ಗೆ ನಮ್ಮ ರಿಪೋರ್ಟಿನಿಂದ ತಾವು ತಿಳಿದುಕೊಳ್ಳಬಹುದು ಮೊದಲು ಕಾರ್ಯಾರಂಭದಲ್ಲಿ ಮೀನುಗಾರಿಕೆ ಅಭಿವೃದ್ಧಿ ಕಡಿಮೆ ಪ್ರಮಾಣದಲ್ಲಿ ನಡೆಯುತ್ತಿತ್ತು ಮಾತ್ರ ವ್ಯವಸ್ಥೆ ಇತ್ತು ನಾವು ಇತ್ತೀಚಿನ ಅವಧಿಯಲ್ಲಿ ೨೩ ಮೀಡಿಯಂ ರಿಜರ್ವಾಯರ್ಸ್ ಮತ್ತು ೩೦ ಸಾವಿರ ಮೈಸರ್ ಟ್ಯಾಂಕ್ಸ್, ೨,೭೦೦ ಮೇಜರ್ ಟ್ಯಾಂಕ್ಸ್ ಮತ್ತು ೯ ಸಾವಿರ ಕಿಲೋ ಮೀಟರ್ ತಿವರ್ ಪ್ಟೇಮ್ ಇವುಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ವ್ಯವಸ್ಥೆ ಮಾಡಲಾಗಿದೆ ಮತ್ತು ಮೀನು ಮರಿಗಳ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೂ ಕೂಡ ೨೬ ಜಿಲ್ಲಾವಾರು ಫಾರಂಗಳನ್ನು ಪ್ರಾರಂಭ ಮಾಡಿದ್ದೇವೆ ತುಂಗಭದ್ರಾ ಡ್ಯಾಮ್ ಸವಿಾಪದಲ್ಲಿ ಕೂಡ ಬೋರ್ಡ್ ಮುಖಾಂತರ ಮೀನು ಮರಿಗಳನ್ನು ಉತ್ಪನ್ನ ಮಾಡುವ ಕಾರ್ಯಕ್ರಮ ಕೈಗೊಂಡಿದ್ದೇವೆ, ಮೊದಲು ಇದ್ದ ವ್ಯವಸ್ಥೆಗಿಂತಲೂ ಹೆಚ್ಚಾಗಿ ೫ ಕೋಟಿ ಮೀನು ಮರಿಗಳ ಉತ್ಪನ್ನವಾಗುವುದಕ್ಕೆ ವ್ಯವಸ್ಥೆಯಾಗಿದೆ. ಈ ರೀತಿ ಇನ್ನೂ ಫಿಷ್ ಕಲ್ಚರ್ ಬೆಳೆಸುವುದಕ್ಕೆ ೨೮ ಎ ಎಸ್. ಪಿ. ಬ್ಲಾಕ್‌ಗಳಲ್ಲಿ ಮೆಶ್ತು ೧೮ ಸಿ. ಡಿ. ಬ್ಲಾಕ್‌ಗಳಲ್ಲಿ ಎಕ್ಸ್‌ಟೆನ್‌ಷೀವ್ ಪ್ರೋಗ್ರಾಂ ತೆಗೆದುಕೊಂಡು ಈ ಬಗ್ಗೆ ಅಗತ್ಯವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮೀನಿನ ಮಾರ್ಕೆಟಿಂಗ್ ಬೆಳೆಸುವುದಕ್ಕೆ ಮೂರು ಜಿಲ್ಲೆಗಳಲ್ಲಿ ಮೀನು ಮಾರ್ಕೆಟ್ ಫೆಡರೇಷನ್‌ಗಳನ್ನು ಮಾಡಿದ್ದೇವೆ. ಹೀಗೆ, ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸಾಕಷ್ಟು ಮೀನುಗಾರಿಕೆ ಅಭಿವೃದ್ಧಿಗಾಗಿ ಕೆಲಸ ಕಾರ್ಯಗಳನ್ನು ಕೈಗೊಂಡಿದ್ದೇವೆ.

ಶ್ರೀ ಎಸ್ ಎಂ. ಶಿರನಾಳಿ ಚಂದ್ರಶೇಖರ್.—ತಾವು, ದೊಡ್ಡ ದೊಡ್ಡ ಜಲಾಶಯಗಳನ್ನು ಮೀನಿನ ಮರಿಗಳ ಅಭಿವೃದ್ಧಿಗಾಗಿ ಸಾಕಷ್ಟು ಉಪಯೋಗಿಸುತ್ತಿದ್ದೀರಾ ? ಹಾಗಿದ್ದಲ್ಲಿ, ಲಿಂಗಸಮಕ್ಕಿಯಲ್ಲಿ ಹೆಚ್ಚು ನೀರು ಬಂದು ತುಂಬಿ ಹರಿಯುತ್ತದೆ. ಆದರೆ ಮೀನುಗಾರಿಕೆ ಇಲಾಖೆಯವರು ಅದನ್ನು ಉಪಯೋಗಿಸುತ್ತಾ ಇಲ್ಲ.

ಶ್ರೀ ಕೆ. ಟಿ. ರಾಠೋಡ್.—ಅಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಕೆಲವು ಅಡಚಣೆಗಳು ಇದ್ದವು. ಅಲ್ಲಿ ಸಾವಕಾಶ ಇರಲಿಲ್ಲ. ಅಲ್ಲಿ ಲಭ್ಯವಾಗುವ ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು ಅಲ್ಲೂ ಕೂಡ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.—ಕ್ವಾವಿ, ತಮ್ಮ ಇಲಾಖೆ ಬಹಳ ಅಭಿವೃದ್ಧಿಯಾಗುತ್ತಿದೆ ಎಂದು ತಮ್ಮ ಉತ್ತರದಿಂದ ಅರ್ಥವಾಗುತ್ತದೆ. ಎಷ್ಟನೆಯದು, ಕಾರ್ಯಚರಣೆ ಜಾಸ್ತಿಯಾಗಿರುವುದರಿಂದ, ಈಗಿರುವ ಪದ್ಧತಿಯನ್ನು ಕಪ್ಪಿಸಿ, ಇವಕ್ಕೆ ಸೆಪರೇಟ್ ಡೈರೆಕ್ಟರೇಟ್ ಮಾಡುತ್ತೀರಾ ? ಅಥವಾ ಫಿಷರೀಶ್ ಕಾರ್ಪೊರೇಷನ್ ಎಂದು ಮಾಡುವುದಕ್ಕೆ ಸರಕಾರ ಆಲೋಚನೆ ಮಾಡಿದೆಯೇ ?

ಶ್ರೀ ಕೆ. ಟಿ. ರಾಠೋಡ್.—ಸನ್ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ಇನ್‌ಲ್ಯಾಂಡ್ ಫಿಶರೀಶ್ ಕಾರ್ಪೊರೇಷನ್‌ವೊಂದನ್ನು ಮಾಡಬೇಕೆನ್ನುವ ವಿಚಾರ ಈಗಾಗಲೇ ಸರಕಾರದ ಪರಿಶೀಲನೆಯಲ್ಲಿದೆ. ಆದರೆ ಇನ್‌ಲ್ಯಾಂಡ್ ಫಿಶರೀಸ್‌ಗೆ ಬೇರೆ ಡೈರೆಕ್ಟರನ್ನು ಮಾಡಬೇಕೇ ಅಥವಾ ಜಾರದೇ ಎನ್ನುವ ವಿಚಾರ ಈಗ ಪರಿಶೀಲನೆಯಲ್ಲಿದ್ದರೂ ಕೂಡ ಸದ್ಯದ ಹಣದ ಅಭಾವ ಪರಿಸ್ಥಿತಿಯಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಜಾಸ್ತರವಾಗುತ್ತದೆ.

ಶ್ರೀ ಎಂ. ಬಿ. ರಾಮಸ್ವಾಮಿ —ಫಿಷರ್‌ಮೆನ್‌ಗೆ ಸಾಲ ಮತ್ತಿರ ಸೌಲಭ್ಯಗಳನ್ನು ಕೊಡಲು ಎಷ್ಟು ಕೋ-ಆಪರೇಟಿವ್ ಸೊಸೈಟಿಗಳನ್ನು ಮಾಡಿದ್ದೀರಿ ? ಎಷ್ಟೆಷ್ಟು ಜನಗಳಿಗೆ ಸಾಲವನ್ನು ಒದಗಿಸಿಕೊಟ್ಟಿದ್ದೀರಿ ? ಎಷ್ಟು ಹಣವನ್ನು ಬಜೆಟ್ಟಿನಲ್ಲಿ ಶೇಖರಿಸಿಟ್ಟಿದ್ದೀರಿ ಎಂದು ಹೇಳುವುದಕ್ಕೆ ವಿವರ ಇದೆಯೇ ?

ಶ್ರೀ ಕೆ ಟಿ. ರಾಠೋಡ್.—ಕೋ-ಆಪರೇಟಿವ್ ಸೆಕ್ಟಾರ್ ಕಳಗೆ ಮೀನುಗಾರಿಕೆ ಅಭಿವೃದ್ಧಿಗಾಗಿ ಎಲ್ಲಾ ಕಡೆಗೂ ನಾವು ಸೊಸಾಯಿಟಿಗಳನ್ನು ಪ್ರಾರಂಭ ಮಾಡುತ್ತಿದ್ದೇವೆ ಸದ್ಯಕ್ಕೆ ರಾಜ್ಯದಲ್ಲಿ ೬೨ ಫಿಶ್‌ರೀಸ್ ಕೋ-ಆಪರೇಟಿವ್ ಸೊಸಾಯಿಟಿಗಳನ್ನು ಆರ್ಗನೈಜ್ ಮಾಡಿದ್ದಾಗಿದೆ. ಇದರ ಜೊತೆಗೆ ಕರಾವಳಿ ಜಿಲ್ಲೆಗಳಾದಂಥ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತಲಾ ಒಂದೊಂದರಂತೆ ಎರಡು ಫೆಡರೇಷನ್‌ಗಳು ಕೆಲಸ ಕಾರ್ಯಗಳನ್ನು ಮಾಡುತ್ತಿವೆ. ಇದರ ಜೊತೆಗೆ ಫಿಶರೀ ಡೆವಲಪ್‌ಮೆಂಟ್ ಕಾರ್ಪೊರೇಷನ್ ಕೂಡ ಈ ದಿಶೆಯಲ್ಲಿ ಕೆಲಸ ಮಾಡುತ್ತಿದೆ. ಈ ಸಹಕಾರಿ ಸಂಸ್ಥೆಗಳು ವ್ಯಾಪಕವಾಗಿ ಕೆಲಸಮಾಡಲು ಅನುಕೂಲವಾಗುವಂತೆ ಹೊಸದಾಗಿ ಎನ್ ಸಿ ಡಿ ಸಿ ಸಂಸ್ಥೆಯಿಂದ ಇವೆಲ್ಲ ಸೊಸಾಯಿಟಿಗಳ ಕಾರ್ಯಕ್ರಮಗಳಿಗೆ ಹಣದ ಸಹಾಯ ಒದಗಿಸಿಕೊಡಲು ಪ್ರಯತ್ನಿಸಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ,—ಒಳನಾಡು ಮೀನು ಅಭಿವೃದ್ಧಿ ಯೋಜನೆ ಸಾಕಷ್ಟು ದೇಶದಲ್ಲಿ ಅಭಿವೃದ್ಧಿ ಆಗಿಲ್ಲ ಎಂದು ನಾನಾದರೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ ಕಾರಣ, ಪ್ರತಿಯೊಂದು ತಾಲ್ಲೂಕಿನಲ್ಲೂ ಕೆರೆತಕ್ಕ ಬೆಸ್ತರ ಬಗ್ಗೆ ಲಕ್ಷ್ಯ ಕೊಟ್ಟಿಲ್ಲ ಮತ್ತು ಅನೇಕ ಕೆರೆಕಟ್ಟೆಗಳು ಏನಿವೆ ಅವುಗಳಲ್ಲಿ ಮೀನುಗಳನ್ನು ಸಾಕಣೆ ಮಾಡಿ, ಮಾರಾಟಕ್ಕೆ ವ್ಯವಸ್ಥೆ ಮಾಡಿಲ್ಲ, ಇದೇ ರೀತಿ ಅನೇಕ ಕೆಲಸ ಕಾರ್ಯಗಳನ್ನು ಮಾಡುವುದಿದ್ದರೂ, ಕೂಡ ಒಳನಾಡಿನಲ್ಲಿ ಸಾಕಷ್ಟು ಮೀನುಗಳ ಅಭಿವೃದ್ಧಿ ಬಗ್ಗೆ ಗಮನ ಹರಿಸಿಲ್ಲ ಎನ್ನುವುದನ್ನು ತಾವೇ ಒಪ್ಪಿಕೊಳ್ಳುತ್ತೀರಿ. ಈ ಒಗ್ಗೆ ತಾವು ನಿರ್ದಿಷ್ಟ ನಿಲುವನ್ನು ತೆಗೆದುಕೊಂಡು ಒಳನಾಡಿನಲ್ಲಿ ಮೀನು ಅಭಿವೃದ್ಧಿಪಡಿಸುವುದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ.ಟಿ ರಾಠೋಡ್.—ಒಳನಾಡು ಮೀನು ಅಭಿವೃದ್ಧಿಗಾಗಿ ಇಲ್ಲಿಯವರೆಗೆ ಸಾಕಷ್ಟು ಕಾರ್ಯಕ್ರಮಗಳನೇಕವನ್ನು ತೆಗೆದುಕೊಂಡಿದ್ದರೂ ಕೂಡ, ಇನ್ನೂ ತೆಗೆದುಕೊಳ್ಳಬೇಕಾದಂಥ ಕೆಲಸಕಾರ್ಯಗಳು ಬಹಳ ಇವೆ ಆದರೆ, ಸದ್ಯದ ಹಣದ ಅಭಾವದಿಂದ ನಾವು ಆಶಿಸುವ ಎಲ್ಲ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಸ್ವಲ್ಪ ದುಸ್ತರವಾಗಿದೆ ಎಂದು ನಾನು ಆಗಲೇ ಹೇಳಿದ್ದೇನೆ. ಈಗಾಲೇ ನಾನು ಹೇಳಿದ ೨೮ ಬ್ಲಾಕುಗಳಲ್ಲಿ ಎ.ಎನ್.ಪಿ ಕಾರ್ಯಕ್ರಮ ಪ್ರಾರಂಭಗೊಂಡು ಕಾರ್ಯಗತವಾಗುತ್ತಿವೆ. ಮಾಡಿದ್ದೇವೆ. ೧೮ ಸಿ. ಡಿ. ಬ್ಲಾಕುಗಳಲ್ಲಿ ಇಂಟೆನ್ಸಿವ್ ಡೆವಲಪ್‌ಮೆಂಟ್ ಆಫ್ ಫಿಷರೀಸ್ ತೆಗೆದುಕೊಂಡಿದೆವೆ. ಇಲ್ಲಿಯವರೆಗೆ ನಮ್ಮ ಇಲಾಖೆಯಲ್ಲಿ ಪ್ರತಿ ಜಿಲ್ಲೆಗೂ ಒಬ್ಬ ಅಧಿಕಾರಿ ಇರಲಿಲ್ಲ. ಈ ಪ್ರತಿ ಜಿಲ್ಲೆಯಲ್ಲೂ ಅಸಿಸ್ಟೆಂಟ್ ಡೈರೆಕ್ಟರ್ ಎಂದು ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದೇವೆ. ಈಗ ಫಿಶರೀಸ್ ಡಿಪಾರ್ಟ್‌ಮೆಂಟನ್ನು ರೀ ಆರ್ಗನೈಜ್ ಮಾಡಬೇಕೆ ದು ಎಲ್ಲಾ ಕಾರ್ಯಕ್ರಮಗಳನ್ನೂ ಸಿದ್ಧಪಡಿಸಿಕೊಂಡು ಇಟ್ಟುಕೊಂಡಿದ್ದೇವೆ. ಆದರೆ, ಹಣದ ಅಭಾವವಿರುವುದರಿಂದ ಮತ್ತು ಈಗ ಎಕನಾಮಿ ಆರ್ಡರ್ ಜಾರಿಯಲ್ಲಿ ಇರುವುದರಿಂದ, ಡಿಪಾರ್ಟ್‌ಮೆಂಟನ್ನು ರೀ-ಆರ್ಗನೈಜ್ ಮಾಡಿ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸ್ವಲ್ಪ ತೊಂದರೆಯಾಗಿದೆ.

ಶ್ರೀ ಕೆ. ಪಿಜ್. ಹನುಮೇಗೌಡ,—ಸ್ಥಳೀಯ ಸಂಸ್ಥೆಗಳು, ತಾಲ್ಲೂಕು ಬೋರ್ಡ್, ಪಂಚಾಯತಿ ಮತ್ತು ಯುವಕ ರೈತ ಸಂಘ ಇವುಗಳ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಮೈಸೂರ್ ಟ್ಯಾಂಕುಗಳಲ್ಲಿ ಮೀನು ಸಾಕುವುದಕ್ಕೆ ಸಾಲ ಕೊಡಲು ಆರ್ಡರ್ ಕೊಟ್ಟಿದ್ದಾರೆ. ಕೆಲವರಿಗೆ ಸಾಲವನ್ನೂ ಕೊಟ್ಟಿದ್ದೀರಿ. ಇದರಲ್ಲಿ ಏನು ಸಮಸ್ಯೆ ಇದೆ ಎಂದರೆ, ಹಿಂದಿನ ಮೂರು ವರ್ಷಗಳ ಆವರೇಜ್ ವರ್ಕಿಂಗ್ ಮಾಡಿಕೊಡಬೇಕೆಂಬ ನಿಬಂಧನೆಯನ್ನು ಹಾಕಿದ್ದೀರಿ, ಇದರಿಂದ ಅನೇಕ ಸಂಘ ಸಂಸ್ಥೆಗಳು ಮುಂದಕ್ಕೆ ಬರುತ್ತಾ ಇಲ್ಲ. ನಷ್ಟ ಆಗುತ್ತದೆ ಎನ್ನುವ ದೃಷ್ಟಿಯಿಂದ ಇವನ್ನು ಗಣನೆಗೆ ತೆಗೆದುಕೊಂಡು ಮಾನ್ಯ ಸಚಿವರು, ಮುಂದೆ ಬರತಕ್ಕ ಸ್ಥಳೀಯ ಸಂಸ್ಥೆಗಳಿಗೆ ರಿಯಾಯಿತಿ ಕೊಡಲಿ ಈ ಕೆರೆಗಳಲ್ಲಿ ಅವರು ಮೀನು ಸಾಕಣಿಕೆ ಮಾಡುವುದರ ಬಗ್ಗೆ ಸಾಲ ಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಕೆ. ಟಿ. ರಾಠೋಡ್.—ಪಂಚಾಯತಿ ಮತ್ತು ಸ್ಥಳೀಯ ಸಂಸ್ಥೆಗಳು ಎಲ್ಲೆಲ್ಲಿ ಮುಂದೆ ಬಂದಿವೆಯೋ ಅಲ್ಲೆಲ್ಲಾ ಅವಕಾಶ ಕೊಟ್ಟಿದ್ದೇವೆ. ಸಿಹಿ ನೀರಿನ ಮೈನರ್ ಟ್ಯಾಂಕ್ಸ್ ಏನಿವೆ ಅವುಗಳಲ್ಲಿ ಸಾಧ್ಯವಾದಲ್ಲೆಲ್ಲಾ ಪಂಚಾಯತಿಗಳು ಅವುಗಳ ವ್ಯವಸ್ಥೆಯನ್ನು ನೋಡಿಕೊಳ್ಳುವ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು. ಸೊಸಾಯಿಟಿಗಳು ಎಲ್ಲಿ ಮುಂದೆ ಬಂದಿವೆ, ಅವುಗಳಿಗೂ ಸೂಕ್ತ ಸೌಲಭ್ಯಗಳನ್ನು ಕೊಟ್ಟಿದ್ದೇವೆ, ಉಳಿದ ೨,೭೦೦ ಮೇಜರ್ ಟ್ಯಾಂಕ್ಸ್ ಮತ್ತು ರಿಜರ್‌ವಾಯರ್ ಏನಿವೆ, ಅವುಗಳ

(ಶ್ರೀ ಕೆ. ಟಿ. ರಾತೋಡ್)

ನ್ನೆಲ್ಲಾ ಸರಕಾರವೇ ತನ್ನ ಹತೋಟಿಯಲ್ಲಿ ಇಟ್ಟುಕೊಂಡಿದೆ. ಇವೆಲ್ಲವನ್ನೂ ಸುವ್ಯವಸ್ಥೆ ಮಾಡುವುದ ಕ್ಕಾಗಿಯೇ ಕಾಂಪ್ರಹೆನ್‌ಸೀವ್ ಫಿಷ್‌ರೀಸ್ ಆಕ್ಟ್‌ನ್ನು ಒಂದನ್ನು ಈಗಾಗಲೇ ಸಿದ್ಧಪಡಿಸಿದ್ದೇವೆ. ಅದು ಈಗ ಕಾನೂನು ಇಲಾಖೆಯ ಪರಿಶೀಲನೆಯಲ್ಲಿದೆ. ಅದನ್ನು ಇಷ್ಟರಲ್ಲೇ ಈ ಅಧಿವೇಶನದಲ್ಲಿ ಇಂಟ್ರೊ ಡ್ಯೂಸ್ ಮಾಡುವ ಆಶೆ ನನ್ನದು.

ಶ್ರೀ ಎಸ್ ಎಂ. ಶೀರನಾಳಿ ಚ ದ್ರಶೇಖರ್ —ತಾವು ಲಿಂಗನಮಕ್ಕಿ ಜಲಾಶಯದಲ್ಲಿ ಮೀನು ಅಭಿವೃದ್ಧಿ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದ್ದೀರಿ. ಅದಕ್ಕೆ ಎಷ್ಟು ಕಾಲ ಬೇಕಾಗುತ್ತದೆ.

ಶ್ರೀ ಕೆ. ಟಿ. ರಾತೋಡ್.—ಈಗಿರುವ ಹಣದ ದುಸ್ಥಿತಿಯಲ್ಲಿ ಇಂತಿಷ್ಟು ಅವಧಿಯಲ್ಲೇ ಮಾಡುವುದಕ್ಕಾ ಗುತ್ತದೆ ಎಂದು ನಿಖರವಾಗಿ ಹೇಳುವುದಕ್ಕಾಗುವುದಿಲ್ಲ. ಆದರೂ ಕೂಡ ಆದಷ್ಟು ಬೇಗ ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡೋಣ.

* *Rural Veterinary Dispensaries in some Villages of Kallambella constituency*

144. SRI T. TARE GOWDA (Kallambe la).—

Will the Minister for Agriculture and Animal Husbandry be pleased to state.—

(a) whether representations for opening Rural Veterinary D spensary (RVDs) at Tneerthapura, Kandikere Hobli, Chikkanayakanaha li Taluk, Manchaladhore of Hagalwadi Hob i of Gubbi Taluk, Doddagrahara of Kallambella Hobli of Sira Taluk of Kal ambella Constituency have been received by Government ;

(*b*) if so, when the Government intend to open the Rural Veterinary Dispensaries (RVDs) in these villages ;

(*c*) whether the Government intend to call the feasibility report for opening Rural Vet rinary Dispensaries in these places from the District Veterinary Officer ?

SRI N. CHIKKE GOWDA (Minister for Agriculture and Animal Husbandry) —

(a) Yes, except in respect of Manchaladhore.

(*b*) The matter is under consideration.

(*c*) Yes.

ಶ್ರೀ ತಾರೇಗೌಡ.—ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ತೀರ್ಥಪುರ ಗ್ರಾಮಕ್ಕೆ ಪಶು ವೈದ್ಯ ಶಾಲೆ ಯೊಂದನ್ನು ಕಟ್ಟುವುದಕ್ಕೋಸ್ಕರ, ತಾಲ್ಲೂಕು ಬೋರ್ಡಿನಿಂದ ಶಿಫಾರಸು ಮಾಡಿ ಕೋಟು ಕೊಡುವುದಕ್ಕೆ ಸಿದ್ಧವಾಗಿದ್ದೇವೆಂದು ತೀರ್ಮಾನ ಮಾಡಿ ತಮಗೆ ಕಳುಹಿಸಿರುವುದು ಇದೆಯೇ ?

† ಶ್ರೀ ಎನ್. ಚಿಕ್ಕೇಗೌಡ —ಉತ್ತರದಲ್ಲೇ ಹೇಳಿದ್ದೇನೆ. ಅರ್ಜಿ ಬಂದಿದೆ ಮತ್ತು ತಾಲ್ಲೂಕು ಬೋರ್ಡಿನಿಂದಲೂ ಶಿಫಾರಸು ಬಂದಿರಬಹುದು. ಗುಬ್ಬಿ ತಾಲ್ಲೂಕಿನಲ್ಲಿ ೧೯೭೨ರ ಸೆನ್ಸಸ್ ಪ್ರಕಾರ ೮೫೫೬೬ ಜಾನುವಾರುಗಳು ಇವೆ. ಮತ್ತು ಅಲ್ಲಿ ೭ ವೆಟರ್ನರಿ ಆಸ್ಪತ್ರೆಗಳು ಇವೆ. ಗುಬ್ಬಿ ಕಸಬದಲ್ಲಿ ಎರಡು ವೆಟರ್ನರಿ ಡಿಸ್‌ಪೆನ್ಸರಿ ಇದೆ. ಪ್ರತಿ ೧೫ ಸಾವಿರ ಜಾನುವಾರುಗಳಿಗೆ ಒಂದು ಆಸ್ಪತ್ರೆ ಕೊಡ